performing his duties and that he was released on bail the same day.

STATEMENT BY MINISTER FOR EDUCATION

Re : Appropriateness of the Education Minister being the Chairman of the Mysore State Sahitya Academy.

MADAM SPEAKER.— The Education Minister may make his statement regarding. Mysore State Sahitya Academy.

Sri A. R BADRINARAYANA (Minister for Education).— Madam Speaker, I wish to make the following statement in connection with the notice by Sri Konandur Lingappa regarding the appropriateness of the Education Minister being the Chairman of the Mysore State Sahitya Academy.

The Mysore State Sahitya Academy has got a constitution of its own approved as long back as October 1961. According to article 5 of the said constitution the Minister for Education will be the Chairman of the Academy. Hence all these years the Minister for Education has been the Chairman of the said Academy.

However, during the President's rule, Governor had to nominate a non-official member to be the Chairman of the Academy. Accordingly late Sri A. N. Krishna Rao was nominated as Chairman of the said Academy for three years. Consequent on the demise of the said Sri A. N. Krishna Rao, Sri Adya Rangacharya was nom nated as the Chairman of the Academy only for the unexpired portion of the appointment of late Shri A. N. Krishna Rao.

Consequent on the installation of the popular Ministry and the moment the Education Minister was sworn in, he automatically became the Chairman of the Sahitya Academy in terms of the constitution of the Academy. However, since Sri. Adya. Rangacharya had been appointed for a particular period. the arrangement was not disturbed and he was continued in the office for the unexpired term of the nomination. On the expiry of the said term, the Education

Minister automatically became the Chairman of the Sahitya Academy.

The term of the General Council and the Executive Board of the Academy expired on 27-1-1973. Therefore, the General Council and the Executive Board of the Academies had to be reconstituted. It is in accordance with this provision that the General Council and the Executive Board of the Academy were reconstituted in G.O. No. ED 132 GSN 71 dated 11-9-1973 and as per this order, the Education Minister is the Chairman of the Academy. There is nothing new in this arrangement and it is only in compliance with the constitutional provisions of the Academy.

Further the Chairman is only the mouth piece of the Academy and he is the official head connecting the Academy and the Government. It is the General Council that takes the policy decisions of the Academy and the Chairman is not judging the quality of the literature etc. and he is guided by the decisions of the General Council. The fact of the Education Minister being the Chairman does not come in the way of the Academy's decisions regarding the Academy's policies, functions and its activities. On the other hand, the association of the Education Minister with the Academy as its Chairman is an indication of the great value that has been attached to the work of the Academy by the Govt. The intention of continuing this arrangement is to help the Academy in the effective implementation of its decisions.

Any changes to the constitution must be made by passing of a resolution in the General Council and approved by Govt.

ಶ್ರೀ ಕೊಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಅಧ್ಯಕ್ಷರೇ, ಮೊದಲನೆಯದಾಗಿ ನಮ್ಮ ಸರ್ಕಾರದವರು ನಮ್ಮ ರಾಜ್ಯದಲ್ಲಿ ಈ ಸಾರಿ ಸಾಹಿತ್ಯ ಅಕಾಡಮಿಯನ್ನು ಏನು ರಚನೆ ಮಾಡಿದ್ದಾರೆ ಅವರ ಬಗ್ಗೆ ಎಲ್ಲರೂ ಕೂಡ ನಾವೆಲ್ಲ ಅಭಿನಂದಿಸಬೇಕಾದ್ದು ನಮ್ಮ ಕರ್ತವ್ಯ. ಏತಕ್ಕೆಂದರೆ ಬಹಳ ಸಮರ್ಪಕವಾಗಿ ಎಲಾ ದೃಷ್ಟಿಕೋನಗಳಲ್ಲಿ ರತಕ್ಕಂಥ ಸಾಹಿತಿಗಳನ್ನು ಅದರಲ್ಲಿ ಸೇರಿಸಿದ್ದಾರೆ. ಅದಕ್ಕಾಗಿ ಆವರಿಗೆ ಅಭಿನಂದಿಸುತ್ತೇನೆ ಇವರಲ್ಲಿ ಮೂಲಭೂತವಾದ ಪ್ರಶ್ನೆ ಏನೆಂದರೆ ಈ ಬುದ್ಧಿಜೀವಿಗಳ

ವೇಲೆ ಸರ್ಕಾರ ಈ ಹತೋಟಿ ಇಟ್ಟುಕೊಳ್ಳುವದು ಸರಿಯೇ? ಈ ಸಾಹಿತ್ಯ ಅಕಾಡಮಿ ಬುದ್ಧಿಜೀವಿಗಳಿಗೆ ಸಂಬಂಧಪಟ್ಟದ್ದಾದ್ದರಿಂದ ಸಂವಿಧಾನದಲ್ಲಿ ಈ ಬಗ್ಗೆ ಏನು ಇದೆ ಅದನ್ನು ತಿದ್ದುಪಡಿ ಮಾಡಿ ಆ ಅಕಾಡಮಿಯಲ್ಲೇ ಯಾರಾದರೂ ಸಾಹಿತಿಗಳಾಗಿರುವವರನ್ನು ಅಧ್ಯಕ್ಷರನ್ನಾಗಿ ಮಾಡುವದು ಯುಕ್ತ ಎಂದು ನಾನು ಹೇಳುತ್ತೇನೆ. ನಾನು ಈ ರೀತಿ ಹೇಳುವದು ವಿದ್ಯಾಮಂತ್ರಿಗಳನ್ನು ದೋಷರೋಪಣೆ ಮಾಡುತ್ತೇನೆ ಅನ್ನುವ ಪ್ರಶ್ನೆ ಅಲ್ಲ. ಇದು ತತ್ವದ ಪ್ರಶ್ನೆಗೆ ಸಂಬಂಧಪಟ್ಟದ್ದು. ಈ ಬುದ್ಧಜೀವಿಗಳು ಸ್ವತಂತ್ರವಾಗಿ ತಾವಾಗಿಯೇ ವಿಮರ್ಶೆ ಮಾಡಿ ಈ ಸಾಹಿತ್ಯದ ಮೂಲಗಳನ್ನು ವಿಚಾರ ಮಾಡುವುದು ಇದರಲ್ಲಿ ಅವಶ್ಯವಾಗಿದೆ ಈ ಬಗ್ಗೆ ಯಾವುದೂ ಕೂಡ ಸರ್ಕಾರದ್ದು ಹಸ್ತಕ್ಷೇಪ ಇರಬಾರದು. ಇದರಲ್ಲಿ ಸಂಪೂರ್ಣ ಸ್ವಾಯುತ್ತತೆ ಇದೆ ಎನ್ನುವುದು ಮೂಲಭೂತವಾದ ಪ್ರಶ್ನೆ. ಈ ದೃಷ್ಟಿಯಿಂದ ನಾನು ಹೇಳುವುದು ಏನೆಂದರೆ ಕನ್ನಡ ಸಾಹಿತ್ಯ ಪರಿಷತ್ತಾಗಲಿ ಅಥವಾ ಸಂಗೀತ ಸಾಹಿತ್ಯ ಅಕಾಡಮಿಯಾಗಲಿ ಇವಕ್ಕೆ ಸಂಪೂರ್ಣ ಸ್ವಾಯತ್ತತೆ ಇರಬೇಕು. ಮತ್ತು ಅಲ್ಲಿ ಈ ಬುದ್ಧಿಜೀವಿಗಳಿಗೆ ಸಂಪೂರ್ಣ ಸ್ವಾತಂತ್ರ್ಯ ಇರಬೇಕು. ಆದರೆ ಅವುಗಳಿಗೆ ನೆರವು ನೀಡುವದಾಗಿದ್ದರೆ ಆ ಕೆಲಸ ನಿಮ್ಮದಾಗಿರಬೇಕೆ ಹೊರತು ಇದರಲ್ಲಿ ಸರ್ಕಾರದ ಹಸ್ತಕ್ಷೇಪ ಇರಬಾರದು. ಈ ದೃಷ್ಟಿಯಿಂದ ನಾನು ಹೇಳುವುದು ಏನೆಂದರೆ ಮಾನ್ಯ ವಿದ್ಯಾಮಂತ್ರಿಗಳು ಈ ಬಗ್ಗೆ ಇರತಕ್ಕಂಥ ಸಂವಿಧಾನವನ್ನು ತಿದ್ದುಪಡಿ ಮಾಡಿ ಅಲ್ಲೇ ಸಾಹಿತ್ಯದಲ್ಲಿರುವವರನ್ನು ಯಾರಾದರೂ ಒಬ್ಬರನ್ನು ಅಧ್ಯಕ್ಷರನ್ನಾಗಿ ಮಾಡುವುದು ಯುಕ್ತವಾದುದು ಎಂದು ಹೇಳುತ್ತೇನೆ. ಈ ಬಗ್ಗೆ ಮಾನ್ಯ ವಿದ್ಯಾಮಂತ್ರಿಗಳ ಅಭಿಪ್ರಾಯ ಏನಿದೆ ಎನ್ನುವದನ್ನು ಕೇಳಲು ಅಪೇಕ್ಷೆ ಪಡುತ್ತೇನೆ.

ಅಧ್ಯಕ್ಷರು —ಅವರು ಈ ಬಗ್ಗೆ ಸ್ಟೇಟ್‌ಮೆಂಟ ಮಾಡಿರುವದರಿಂದ ಇದರ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ.

NOTICES GIVEN UNDER RULE 312

ಶ್ರೀ ಜೆ. ಎಲ್. ಕಬಾಡಿ.—ಅಧ್ಯಕ್ಷರೇ, ನಾನು ರೂಲ್ ೩೧೨ರ ಪ್ರಕಾರ ಒಂದು ನೋಟೀಸ್ ಕಳುಹಿಸಿದ್ದೇನೆ.

ಅಧ್ಯಕ್ಷರು.—ಅದನ್ನು ಸಾಯಂಕಾಲ ನೋಡೋಣ,

ಶ್ರೀ ಕಾಗೋಡು ತಿಮ್ಮಪ್ಪ.—ನಾನೊಂದು ಪ್ರಮುಖವಾದ ಪ್ರಶ್ನೆಯನ್ನು ರೂಲ್ ೩೧೨ರ ಪ್ರಕಾರ ಕಳುಹಿಸಿದ್ದೇನೆ. ಅದು ಏನೆಂದರೆ ಮಂಡ್ಯ ಜಿಲ್ಲೆಯಲ್ಲಿ ಒಂದು ಹಸ್ತಪತ್ರಿಕೆಯನ್ನು ಪ್ರಿಂಟ ಮಾಡಿಸಿ ಹಂಚಿದ್ದಾರೆ ಅದರಲ್ಲಿ ಶಿರೋನಾಮೆಯಲ್ಲಿ ಹಿಂದೂಗಳು ಎಂದು ಪ್ರಿಂಟ ಮಾಡಿಸಿ ಹೊರಡಿಸಿದ್ದಾರೆ. ಇದರ ಬಗ್ಗೆ ಒಂದು ನಿಮಿಷ ಮಾತನಾಡುತ್ತೇನೆ.

ಅಧ್ಯಕ್ಷರು.—ತಾವು ಈಗ ಕಳುಹಿಸಿಬಿಟ್ಟು ಈಗಲೇ ಹೇಳಿಬಿಡಿ ಎಂದರೆ ಅದು ಸರ್ಕಾರಕ್ಕೆ ಗೊತ್ತಾಗಬೇಡವೇ?

ಶ್ರೀ ಕಾಗೋಡು ತಿಮ್ಮಪ್ಪ.—ನಾನು ಇದನ್ನು ಈವಾಗಲೇ ಏತಕ್ಕೆ ಕೇಳುತ್ತಿದ್ದೇನೆ ಎಂದರೆ ಇದರಲ್ಲಿ ಪ್ರಾಮುಖ್ಯತೆ ಇದೆ ಎಂದು ತಿಳಿದುಕೊಂಡಿದ್ದೇನೆ.

ಅಧ್ಯಕ್ಷರು.—೧೨ ಗಂಟೆಗೆ ಈ ಸಭೆ ಸೇರುವಾಗ ಇದನ್ನು ೧೨–೩೦ ಗಂಟೆಗೆ ಕಳುಹಿಸಿದ್ದೀರಿ. ಆದುದರಿಂದ ದಯವಿಟ್ಟು ಕುಳಿತುಕೊಳ್ಳಿ. ಅದನ್ನು ನೋಡುತ್ತೇನೆ.

1–30 P. M.

†ಶ್ರೀ ಜೆ. ಎಲ್. ಕಬಾಡಿ (ಬಳ್ಳೊಳ್ಳಿ).—ಮಾನ್ಯ ಮಂತ್ರಿಗಳಾದ ಶ್ರೀಮಾನ್ ಎಸ್. ಎಂ. ಕೃಷ್ಣರವರು ಅಪೋಷಿಷನ್ ಲೀಡರ್ ಒಂದು ಸ್ಟೇಟ್‌ಮೆಂಟ್ ಕೊಟ್ಟ ದ್ದಕ್ಕೆ ಪ್ರತಿಯಾಗಿ ಅದರ ಮೇಲೆ ಮಾತನಾಡುವಾಗ ಮೇಲ್ಮನೆಯಲ್ಲಿ ಒಂದು ಭರವಸೆಯನ್ನು ಕೊಟ್ಟಿದ್ದರು ಇದನ್ನು ನ್ಯಾಯಾಂಗ ತನಿಖೆಗೆ ಒಳಪಡಿಸುವುದಕ್ಕೆ ನಾನು ಸದಾ ಸಿದ್ಧನಿದ್ದೇನೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಅದನ್ನು ಇಲ್ಲಿಯವರೆಗೆ ಯಾವ ರೀತಿ ತೀರ್ಮಾನ ತೆಗೆದುಕೊಂಡಿಲ್ಲ. ನಾನು ಇದರ ಬಗ್ಗೆ ಮುದ್ದಾವ್ ಆಗಿ ಬಂದು ನೋಟೀಸ್ ಕೊಟ್ಟಿದ್ದೆನು. ಆದ್ದರಿಂದ ಡೆಪ್ಯೂಟಿ ಲೀಡರ್ ಸಭೆಯಲ್ಲಿ ಇದ್ದಾರೆ ಅವರಿಗೆ ಒಂದು ಸ್ಟೇಟ್‌ಮೆಂಟ್ ಕೊಡಬೇಕೆಂದು ತಾವು ಹೇಳಬೇಕು. ನ್ಯಾಯಾಂಗ ತನಿಖೆ ನಡೆಸುತ್ತಾರೋ ಇಲ್ಲವೋ ಹೇಳಲಿ. ಅವರು ಮೇಲ್ಮನೆಯಲ್ಲಿ ಮಾತನಾಡುವಾಗ ಇದನ್ನು ನ್ಯಾಯಾಂಗ ತನಿಖೆಗೆ ಒಳಪಡಿಸುವುದಕ್ಕೆ ಸದಾ ಸಿದ್ಧನಿದ್ದೇನೆ. ಇದರ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಒಂದು ಪತ್ರ ಬರೆದಿದ್ದೇನೆ ಎಂದು ಹೇಳಿದ್ದಾರೆ. ದಯವಿಟ್ಟು ತಾವು ಸರ್ಕಾರಕ್ಕೆ ಹೇಳಿ ಇದರ ಬಗ್ಗೆ ಏನು ತೀರ್ಮಾನ ತೆಗೆದುಕೊಂಡಿದ್ದಾರೆ ಎಂಬುವುದನ್ನು ಅವರು ಹೇಳಬೇಕು. ನಾನು ೬–೭ ಕಾಲಿಂಗ್ ಅಟೆನ್‌ಷನ್ ಮೋಷನ್‌ಗಳನ್ನು ಕಳುಹಿಸಿದ್ದೇನೆ, ಅದಕ್ಕೆ ಇನ್ನೂ ಉತ್ತರ ಬಂದಿಲ್ಲ.

ಅಧ್ಯಕ್ಷರು.—ನಾವು ಇವೊತ್ತು ಮಾನ್ಯ ಸದಸ್ಯರಿಗೂ ಅನುಕೂಲವಾಗಲಿ ಮತ್ತು ಸರ್ಕಾರಕ್ಕೂ ಅನುಕೂಲವಾಗಲಿ ಎಂದು ಐದು ಕಾಲಿಂಗ್ ಅಟೆನ್‌ಷನ್ ನೋಟಿಸುಗಳನ್ನು ತೆಗೆದುಕೊಂಡಿದ್ದೇವೆ. ಒಬ್ಬರು ೭–೮ ನೋಟಿಸುಗಳನ್ನು ಕಳುಹಿಸಿರುತ್ತಾರೆ ಆದರೆ ಎಲ್ಲರ ಕಾಲಿಂಗ್ ಅಟೆನ್‌ಷನ್ ನೋಟಿಸುಗಳನ್ನೂ ಅಕಾಮ್‌ಡೇಟ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಈಗ ಇದು ಒಂದು ರೀತಿ ನೀತಿ ಇಲ್ಲದೆ ಹೋಗಿದೆ. ಮಾನ್ಯ ಕಬಾಡಿಯವರು ದಯವಿಟ್ಟು ಕ್ಷಮಿಸಬೇಕು ಇದು ಯಾರ ಕೈಯ್ಯಲ್ಲೂ ಸಾಧ್ಯವಾಗದ ಮಾತು.

ಶ್ರೀ ಜೆ. ಎಲ್. ಕಬಾಡಿ.—ನಾನು ಈ ವಿಷಯದ ಬಗ್ಗೆ ಸ್ವತಃ ತಮ್ಮ ಆಫೀಸಿಗೆ ಬಂದು ಕೊಟ್ಟಿದ್ದೇನೆ. ಇದು ಒಹಳ ಪ್ರಾಮುಖ್ಯವಾದ ವಿಷಯ. ಆದ್ದರಿಂದ ಇದರ ಬಗ್ಗೆ ಒಂದು ಸ್ಟೇಟ್‌ಮೆಂಟ್ ಸರ್ಕಾರದವರು ಕೊಡುವಂತೆ ಹೇಳಬೇಕು.

RE : BREACH OF MARALAVADI TANK IN KANAKAPURA TALUK

ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರ).—ಮಾನ್ಯ ಅಧ್ಯಕ್ಷರೇ, ಕನಕಪುರ ತಾಲ್ಲೂಕಿನಲ್ಲಿ ಮರಳವಾಡಿಯಲ್ಲಿ ಟ್ಯಾಂಕ್ ಇದ್ದಕ್ಕಿದ್ದಹಾಗೆ ಹೊಡೆದು ಹೋಗಿ ಅನೇಕ ಜನರು ಮೃತಪಟ್ಟಿದ್ದಾರೆ. ಅದರಲ್ಲಿ ಒಬ್ಬ ತಾಯಿ, ಒಬ್ಬ ಮಗಳು ಪ್ರವಾಹದಲ್ಲಿ ಕೊಚ್ಚಿಹೋಗಿದ್ದಾರೆ. ಜೊತೆಗೆ ಬೇಕಾದಷ್ಟು ಆಸ್ತಿಪಾಸ್ತಿಗಳು ಕೊಚ್ಚಿಹೋಗಿ ಲಕ್ಷಾಂತರ ರೂಪಾಯಿ ಹಾಳಾಗಿ ರೈತರಿಗೆ ಬಹಳ ತೊಂದರೆಯಾಗಿ ನಿರ್ಗತಿಕರಾಗಿ ನಿಂತಿದ್ದಾರೆ. ಪತ್ರಿಕಾ ವರದಿ ಪ್ರಕಾರ ಮಾನ್ಯ ಸಚಿವರು ಸ್ಥಳಕ್ಕೆ ಭೇಟಿ ಕೊಟ್ಟಿದ್ದರು ಎಂದು ಕೇಳಿದ್ದೇವೆ. ಆದ್ದರಿಂದ ಇದರ ಬಗ್ಗೆ ಮಾನ್ಯ ಸಚಿವರು ಸರ್ಕಾರದ ಪರವಾಗಿ ತೊಂದರೆಗೀಡಾದ ರೈತರಿಗೆ ಏನು ಪರಿಹಾರ ಒದಗಿಸಿದ್ದಾರೆ ಎಂಬುದಕ್ಕೆ ಒಂದು ಸ್ಟೇಟ್‌ಮೆಂಟ್ ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಅಲ್ಲಿ ಬಹಳ ಭೀಕರವಾದ ಪರಿಸ್ಥಿತಿಯುಂಟಾಗಿದೆ ಆದ್ದರಿಂದ ಇದರ ಬಗ್ಗೆ ಮಾನ್ಯ ಮಂತ್ರಿಗಳು ಏನಾದರೂ ಹೇಳುವುದಿದ್ದರೆ ದಯವಾಡಿ ಹೇಳಬಹುದು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರು ಹೇಳಿದಹಾಗೆ ಅಲ್ಲಿ ಇನ್ನು ೪–೬ ಕೆರೆಗಳು ಏಕಕಾಲದಲ್ಲಿ ಒಡೆದುಹೋಗಿ ಅಲ್ಲಿನ ಜನರಿಗೆ ತುಂಬಾ ತೊಂದರೆಯುಂಟಾಗಿದೆ. ನಾನು ಮತ್ತು ಚೀಫ್ ಇಂಜಿನಿಯರ್, ಜಿಲ್ಲಾಧಿಕಾರಿಗಳು ಮತ್ತು ಪೋಲೀಸರು ಎಲ್ಲರೂ ಅಲ್ಲಿಗೆ ಖುದ್ದು ಹೋಗಿ ನೋಡಿ ಬಂದಿದ್ದೇವೆ. ಈಗ ಒಂದು ಗಂಟೆಯೊಳಗೆ ಅಲ್ಲಿನ ಪರಿಸ್ಥಿತಿಯ ಬಗ್ಗೆ ವರದಿ ಬರಬೇಕಾಗಿತ್ತು. ಅಲ್ಲಿ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೊ ಅದರ ಬಗ್ಗೆ ಸೂಚನೆ ಕೊಡುವುದಕ್ಕೆ ಅಲ್ಲಿ ಆಗಿರ ತಕ್ಕ ಘಟನೆ ಬಗ್ಗೆ ಕರಾರುವಾಕ್ಕಾಗಿ ವಿಷದವಾಗಿ ಎಲ್ಲಾ ಅಂಶಗಳನ್ನು ಒದಗಿಸ ಬೇಕೆಂದು ಆಜ್ಞೆ ಮಾಡಿದ್ದೇನೆ. ಯಾವ ಯಾವ ಕೆರೆಯಲ್ಲಿ ಎಷ್ಟೆಷ್ಟು ಜಮೀನುಗಳು ಮತ್ತು ಆಸ್ತಿಪಾಸ್ತಿಗಳು ಮತ್ತು ಜನರಿಗೆ ಹಾನಿ ಉಂಟಾಗಿದೆ ಎಂಬುದಕ್ಕೆ ಸರಿಯಾದ ವಿವರಗಳು ನಾವು ಹೋದ ಕಾಲಕ್ಕೆ ಸಾಯಂಕಾಲವಾದ್ದರಿಂದ ಅದನ್ನೆಲ್ಲಾ ಪತ್ತೆ ಹಚ್ಚುವುದಕ್ಕೆ ಸಾಧ್ಯವಾಗಲಿಲ್ಲವಾದ್ದರಿಂದ ಚೀಫ್ ಇಂಜಿನಿಯರ್ ಮತ್ತು ಸೂಪರಿಂಟೆಂಡಿಂಗ್ ಇಂಜಿನೀಯರ್ ಇಬ್ಬರು ಸಿಬ್ಬಂದಿಯೊಡನೆ ಅಲ್ಲೇ ಇದ್ದಾರೆ. ಅವರಿಗೆ ನಾನು ತಿಳಿಸಿದ್ದೇನೆ ಒಂದು ಕಾಂಪ್ರಹೆನ್ಸಿವ್ ರೀಪೋರ್ಟು ಕಳುಹಿಸಿಕೊಡ ಬೇಕು ಎಂದು. ಆ ವಿವರಗಳನ್ನೆಲ್ಲಾ ಕಲೆಕ್ಟ್ ಮಾಡುವುದಕ್ಕೆ ಸ್ವಲ್ಪಕಾಲ ಆಗುವುದರಿಂದ ಅದರ ಬಗ್ಗೆ ನಾಳೆ ಒಂದು ಸಮಗ್ರವಾದ ವರದಿಯನ್ನು ಇಲ್ಲಿ ಮಂಡಿಸುತ್ತೇನೆ.

ಶ್ರೀ ಜಿ. ಎನ್. ಪಾಟೀಲ್.— ಮಾನ್ಯ ಅಧ್ಯಕ್ಷರೇ, ತಾವು ಈಗ ತಾನೇ

ಹೇಳಿದಿರಿ. ಒಬ್ಬಿಬ್ಬರು ೭–೮ ಕಾಲಿಂಗ್ ಅಟೆನ್‌ಷ್‌ನ್ ನೋಟೀಸುಗಳನ್ನು ಕಳುಹಿಸುತ್ತಾರೆ. ಅದರಿಂದ ಎಲ್ಲವನ್ನೂ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೆಂದು. ಆದರೆ ನಾನು ಒಂದೇ ಒಂದು ಕಾಲಿಂಗ್ ಅಟೆನ್‌ಷ್‌ನ್ ನೋಟೀಸು ಕೊಟ್ಟಿದ್ದೇನೆ. ಶ್ರೀಮತಿ ಸುಮಿತ್ರಾ ದೇಸಾಯಿಯವರ ಪ್ರಕರಣದ ಬಗ್ಗೆ, ಇಲ್ಲಿಯ ವರೆಗೂ ಅದನ್ನು ತೆಗೆದುಕೊಂಡಿಲ್ಲ, ಅದಕ್ಕೆ ಸರ್ಕಾರದಿಂದ ಯಾವುದೇ ಉತ್ತರ ಸಹಿತ ಬಂದಿಲ್ಲ.

ಅಧ್ಯಕ್ಷರು.— ದಯವಮಾಡಿ ಎಲ್ಲರೂ ಕುಳಿತುಕೊಳ್ಳಿ.

Re : Burning of Important Court Documents in Mandya

ಶ್ರೀ ಎಚ್. ಟಿ. ಕೃಷ್ಣಪ್ಪ (ನಾಗವಂಗಲ).— ಅಧ್ಯಕ್ಷರೇ, ನೊನ್ನೆ ಒಂದು ಗಮನ ಸೆಳೆಯುವ ಸೂಚನೆಯನ್ನು ತಮ್ಮ ಅವಗಾಹನೆಗಾಗಿ ತಂದಿದ್ದೆ. ಅದು ಏನು ಎಂದರೆ ಮಂಡ್ಯ ಕೋರ್ಟುಗಳಲ್ಲಿ ಬಹಳ ಮುಖ್ಯವಾದ ದಾಖಲೆಗಳನ್ನು ತೆಗೆದು ಕೊಂಡು ಹೋಗಿ ಸುಟ್ಟು ಹಾಕಿರುವುದು. ಇದರ ಬಗ್ಗೆ ಇದುವರೆಗೆ ಸರ್ಕಾರ ಏನೂ ಕ್ರಮ ತೆಗೆದುಕೊಳ್ಳದೆ ಸುಮ್ಮನೆ ಇದೆ. ಇವು ಬಹಳ ಪ್ರಾಮುಖ್ಯವಾದ ದಾಖಲೆ ಗಳಾಗಿವೆ. ಈ ಕೃತ್ಯವನ್ನು ಮಾಡಿದಂತಹ ದುಷ್ಕರ್ಮಿಗಳು ಯಾರು ಎಂದು ಇಲ್ಲಿಯ ವರೆಗೆ ಪತ್ತೆ ಮಾಡಿಲ್ಲ. ಇದು ಬಹಳ ಗಂಭೀರವಾದ ವಿಚಾರ. ಎಲ್ಲೂ ನಡೆಯದಂಥ ಘಟನೆ ಇದರಲ್ಲಿ ಸಹಸ್ರಾರು, ಲಕ್ಷಾಂತರ ರೂಪಾಯಿ ವ್ಯವಹಾರದ ದಾಖಲೆಗಳು ಸುಟ್ಟು ಹೋಗಿರುವುದರಿಂದ ಇದು ಬಹಳ ಗಹನವಾದ ವಿಚಾರ, ಆದ್ದರಿಂದ ಇದರ ಬಗ್ಗೆ ಸರ್ಕಾರದವರ ಪ್ರತಿಕ್ರಿಯೆ ಏನು ಎಂದು ತಿಳಿಸಲಿ.

ಅಧ್ಯಕ್ಷರು.— ನೀವು ಹೇಳುತ್ತೀರಿ. ನೀವು ಕಳುಹಿಸಿದ್ದನ್ನು ನಾವು ಸರ್ಕಾರಕ್ಕೆ ಕಳುಹಿಸಿರುತ್ತೇವೆ. ನಮಗೆ ಸ್ಟೇಟ್‌ಮೆಂಟ್ ಬರಲಿ ಅದನ್ನು ತೆಗೆದುಕೊಳ್ಳೋಣ.

ಶ್ರೀ ಎಸ್ ಬಂಗಾರಪ್ಪ.— ರೂಲ್ ೩೧೭ರ ಪ್ರಕಾರ ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ.

ಶ್ರೀ ಕೆ. ಎಚ್. ಹನುಮೇಗೌಡ — ನಾನು ೨ ತಿಂಗಳ ಹಿಂದೆ ಒಂದು ಕಾಲಿಂಗ್ ಅಟೆನ್‌ಷ್‌ನ್ ನೋಟೀಸ್ ಕಳುಹಿಸಿದ್ದೆ.

ಶ್ರೀ ಎಸ್. ಬಂಗಾರಪ್ಪ.— ನನ್ನ ನಿಲುವಳಿ ಸೂಚನೆಯಾದರೂ ಇಷ್ಟೇ. ಮೊನ್ನೆ ನಡೆದಂಥ ಚಳುವಳಿಯಲ್ಲಿ ೨–೩ ಹುಡುಗರು ಪತ್ತೆ ಇಲ್ಲ, ನಾಪತ್ತೆ ಆಗಿದ್ದಾರೆ. ಇದರ ಬಗ್ಗೆ ಸರ್ಕಾರದವರು ಏನಾದರೂ ಒಂದು ಕ್ರಮ ತೆಗೆದು ಕೊಂಡಿದ್ದಾರೆಯೇ ?

ಶ್ರೀ ಕೆ. ಎಚ್. ಹನುಮೇಗೌಡ — ನಾನು ಎರಡು ತಿಂಗಳ ಹಿಂದೆ ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸನ್ನು ಕೊಟ್ಟಿದ್ದೆ. ಅದು ಕೋ-ಆಪರೇಟಿವ್ ಸೊಸೈಟಿ ಗಳವರು ಸಾಲ ಹಂಚುವಾಗ ೬ ರಿಂದ ೭ ಪರ್ಸೆಂಟ್‌ನವರಿಗೆ ಬಡ್ಡಿಯನ್ನು ಹಾಕುತ್ತಿದ್ದಾರೆ.

ಅಧ್ಯಕ್ಷರು.— ಸಂಬಂಧಪಟ್ಟ ಮಂತ್ರಿಗಳು ಇಲ್ಲ, ಈಗ ಹೇಳಿದರೆ ಹೇಗೆ ?

ಶ್ರೀ ಎಸ್. ಎಂ. ಶೀರನಾಳ ಚಂದ್ರಶೇಖರ್.— ಬೆಂಗಳೂರು ಜಿಲ್ಲೆಯಲ್ಲಿ ಮಳೆಯ ಅನಾಹುತ ಹೇಗೆ ಆಗಿದೆಯೋ ಅದೇ ರೀತಿಯಲ್ಲಿ ಮಲೆನಾಡಿನಲ್ಲಿ ಅನಾಹುತ ವಾದುದಕ್ಕೆ ನಾನು ಜೂನ್ ೧೫–೧೬ ರಂದು ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸ್ ಅನ್ನು ಕೊಟ್ಟಿದ್ದೇನೆ. ಇವತ್ತಿನವರೆಗೂ ಅದಕ್ಕೆ ಸರ್ಕಾರದಿಂದ ಉತ್ತರ ಬಂದಿಲ್ಲ. ನಾಳೆ ಅಸೆಂಬ್ಲಿಯ ಕೊನೆಯ ದಿವಸ, ತಾವು ವಿಚಾರಿಸುತ್ತೀರಾ ?

ಅಧ್ಯಕ್ಷರು.— ನೋಡೋಣ.

ಶ್ರೀ ಕೋಣಂದೂರು ಲಿಂಗಪ್ಪ.— ಕಳೆದ ಒಂದು ವಾರದ ಹಿಂದೆ ಮಾನ್ಯ ಮುಖ್ಯಮಂತ್ರಿಗಳು ಸೊಂಡೂರಿನ ಬಗ್ಗೆ ಒಂದು ಹೇಳಿಕೆಯನ್ನು ಕೊಡುತ್ತೇನೆ ಎಂದು ಆಶ್ವಾಸನೆಯನ್ನು ಕೊಟ್ಟಿದ್ದರು ಪ್ರತಿಸಾರಿಯೂ ನಾವು ಕೇಳಿದಾಗಲೆಲ್ಲಾ ಹೇಳಿಕೆ ಕೊಡ ತ್ತೇನೆ ಎಂದು ಹೇಳುತ್ತಿರುತ್ತಾರೆ. ಅದರ ಅರ್ಥ ನಮಗೆ ಗೊತ್ತಾಗುತ್ತಿಲ್ಲ.

ಅಧ್ಯಕ್ಷರು — ಮುಖ್ಯ ಮಂತ್ರಿಗಳು ಬರಲಿ, ವಿಚಾರಿಸೋಣ.

ಶ್ರೀ ಕೋಣಂದೂರು ಲಿಂಗಪ್ಪ.— ನೋ ನೋ,....

ಅಧ್ಯಕ್ಷರು.— ಇದೇನು ಇದು, ತಾವು ಚಿಕ್ಕಮಕ್ಕಳು ಹೇಳಿದಹಾಗೆ ಕೇಳುತ್ತಿದ್ದೀರಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ — ಇಲ್ಲಿ ಮಂತ್ರಿಗಳು ಇಲ್ಲದೆ ಹೋದರೆ ನಾವು ದೇವರಿಗೆ ಹೇಳೋಣವೇ? ಯಾರಿಗೆ ಹೇಳೋಣ ತಾವೇ ಹೇಳಿ? ಅವರನ್ನು ಕರೆ ಕಳುಹಿಸಿ. (ಖ-ಳ ಜನ ಸದಸ್ಯರು ಎದ್ದು ಮಾತನಾಡಲಾರಂಭಿಸಿದರು)

ಅಧ್ಯಕ್ಷರು.— ತಾವು ಹೀಗೆ ಖ.ಳ ಜನ ಎದ್ದು ಮಾತನಾಡಿದರೆ, ನನಗೆ ಏನೂ ಅರ್ಥವಾಗುವುದಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.— ಸಭೆ ನಡೆಯುವಾಗ ಮಂತ್ರಿಗಳು ಇರಬೇಕಾದುದು ಪ್ರಾಮುಖ್ಯವಲ್ಲವೇ?

ಅಧ್ಯಕ್ಷರು.— ನಾನು ನಿಂತಿರುವಾಗ ಆದರೂ ತಾವು ಕುಳಿತುಕೊಳ್ಳಿ, ಮಂತ್ರಿಗಳು ಬರಲಿ, ನಾನು ಅವರನ್ನು ಕೇಳಿ ನಿಮಗೆ ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.— ಬೇರೆ ವಿಷಯದಲ್ಲಿ ತಾವು ಜಾಯಿಂಟ್ ರೆಸ್ ಪಾನ್ಸಿಬಿಲಿಟಿ ಇದೆಯೆಂದು ಹೇಳುತ್ತೀರಿ, ಈ ವಿಷಯದಲ್ಲಿ ಮಾನ್ಯ ಮಂತ್ರಿವರ್ಯರಿಗೆ ಜಾಯಿಂಟ್ ರೆಸ್‌ಪಾನ್ಸಿಬಿಲಿಟಿ ಇರುವುದಿಲ್ಲವೇ ?

ಶ್ರೀ ಕೋಣಂದೂರು ಲಿಂಗಪ್ಪ.— ಒಂದು ವಾರದ ಹಿಂದೆ ನಾವು ಪ್ರಸ್ತಾಪ ಮಾಡಿದಾಗಲೆಲ್ಲಾ ನಾಳೆ ಸ್ಟೇಟಮೆಂಟ್ ಕೊಡುತ್ತೇನೆ ಎಂದು ಹೇಳುತ್ತಿರುತ್ತಾರೆ. ಅರ್ಥ ಮಂತ್ರಿಗಳನ್ನು ರಕ್ಷಣೆ ಮಾಡುವುದಕ್ಕೋಸ್ಕರ ಈ ರೀತಿ ಮಾಡುತ್ತಿದ್ದಾರೆಯೇ? ಆ ರೀತಿ ಏನೋ ಉದ್ದೇಶ ಇರಬಹುದು. ಈ ಸರ್ಕಾರ ಮಾಜಿ ರಾಜಮಹಾರಾಜರು

ಗಳನ್ನು ಸಂರಕ್ಷಣೆ ಮಾಡುವ ಪಟ್ಟಭದ್ರ ಹಿತಗಳನ್ನು ಸಂರಕ್ಷಣೆ ಮಾಡುವ ಗುರಾಣಿ ಎಂದು ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು.— ತಮ್ಮ ವಾಕ್ಚಾತುರ್ಯವನ್ನು ತೋರಿಸುವುದಕ್ಕೆ ಅವಕಾಶ ಸಿಕ್ಕಿತಲಾ ತಮಗೆ.

ಶ್ರೀ ಕೋಣಂದೂರು ಲಿಂಗಪ್ಪ.— ನಮ್ಮ ವಾಕ್ಯಗಳಲ್ಲೇ ಸತ್ಯ ಇರುವುದು.

ಶ್ರೀ ಎಸ್. ಬಂಗಾರಪ್ಪ.— ತಾವು ಮುಖ್ಯ ಮಂತ್ರಿಗಳನ್ನು ಕರೆಯಿಸಬೇಕು.

ಅಧ್ಯಕ್ಷರು.— ಬರುತ್ತಾರೆ ಕೂತುಕೊಳ್ಳಿ.

ಶ್ರೀ ಕೋಣಂದೂರು ಲಿಂಗಪ್ಪ.— ತಮ್ಮ ಎದುರಿಗೆ ಆ ದಿನ ಅವರು ಅಪ್ಪಣೆ ಕೊಡಿಸಿದರು.

ಅಧ್ಯಕ್ಷರು.— ತಾವು ಈ ರೀತಿ ವಿನಾಕಾರಣ ಕಾಲ ಕಳೆದರೆ, ಬೇರೆ ವಿಷಯ ಯಾವುದನ್ನೂ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಇವೊತ್ತು ಆರು ಗಂಟೆಗೆ ಸಭೆ ಅಡ್ಜರ್ನ್ ಆಗುತ್ತದೆ.

MYSORE FOREST (AMENDMENT) BILL, 1973
INTRODUCTION

Sri K. H. PATIL (Minister for Agriculture and Forests).– Madam Speaker, I beg to introduce the Mysore Forest (Amendment) Bill, 1973.

MADAM SPEAKER.— The Mysore Forest (Amendment) Bill, 1973, is introduced.**

DISCUSSION ON A MATTER OF PUBLIC INTEREST UNDER RULE 146.

Re: The Food Situation in the State and the rise in prices of essential commod ties

Sri H. T. KRISHNAPPA (Nagamangala).— Madam Speaker, I move:

"That the food situation in the State and the rise in prices of essential commodities be taken into consideration."

MADAM SPEAKER.— Motion moved :

**Bill annexed an Annexure to this Volume.